ಸ್ಥಳಗಳನ್ನು ಸೇರಿಸಿಕೊಂಡು ರಾಜ್ಯವಾಗಿದೆ. ಅದಕ್ಕೊಂದು ದೀರ್ಘ ಇತಿಹಾಸವೇ ಇದೆ.

ರಾಜರ ಆಳ್ವಿಕೆಯಲ್ಲಿ ರಾಜ್ಯದ ಸೀಮೆಗಳು ವಿಸ್ತಾರವಿದ್ದಾಗ ಸ್ಥಳೀಯ ಜನಸಮುದಾಯದ ಭಾಷೆ ಹಾಗೂ ರಾಜಮನೆತನದ ಭಾಷೆಯ ಹಲವಾರು ಪದಗಳು ಆಡಳಿತ ಭಾಷೆಯಲ್ಲಿ ಬಳಕೆಯಾಗುತ್ತಿದ್ದದು ಒಂದು ಸಹಜ ಪ್ರಕ್ರಿಯೆ ಎಂದು ವಿದ್ವಾಂಸರು, ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಭಾರತದಂತಹ ವಿಸ್ತಾರವಾದ ಭೂಪ್ರದೇಶವನ್ನು ಹಿಂದಿನಿಂದಲೂ ಹಲವಾರು ಮನೆತನಗಳು ಸಾಮ್ರಾಜ್ಯಗಳು ಆಳ್ವಿಕೆ ಮಾಡಿವೆ. ಮೌರ್ಯರು, ಮೊಘಲರು, ಗುಪ್ತರು, ಶಾತವಾಹನ, ಮರಾಠ, ರಜಪೂತರಂತೆ – ಹೂಣ, ಶಕ, ನಿಜಾಮ, ಆದಿಲ್ ಶಾಹಿ, ಅರಬ್ಬರು, ಬಹಮನಿ ಸುಲ್ತಾನರು, ಗ್ರೀಕರು, ಇರಾನಿಯನ್ನರು, ಯೂರೋಪಿಯನ್ನರು, ಪರ್ಷಿಯನ್ನರು ಮೊದಲಾದವರು ಆಡಳಿತ ನಡೆಸಿದ್ದಾರೆ.

ಕರ್ನಾಟಕ ಪ್ರಾಂತ್ಯವು ಹಲವಾರು ಹೊರ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಂತೆ ಸ್ಥಳೀಯ ಗಂಗ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ವಿಜಯನಗರ, ಹೊಯ್ಸಳ ಮೊದಲಾದ ಹೆಸರಾಂತ ಪ್ರಭುತ್ವಗಳ ಆಳ್ವಿಕೆಯನ್ನು ಸ್ವೀಕರಿಸುತ್ತಾ ಅಧಿಕಾರದ ಚುಕ್ಕಾಣಿ ಹಿಡಿದ ಪ್ರಭುತ್ವದ ಒಲವನ್ನು ತನ್ನ ಆಡಳಿತದ ಭಾಷೆಯಾಗಿ ಸ್ವೀಕರಿಸುತ್ತಾ ಬಂದಿದೆ. ಹಾಗಾಗಿ ಕರ್ನಾಟಕದ ಆಡಳಿತದ ಭಾಷೆಯಲ್ಲಿ ಹಲವಾರು ಪ್ರಾಂತೀಯ, ವಿದೇಶಿ ಪದಗಳು ಸೇರಿಕೊಂಡಿರುವುದನ್ನು ಸ್ಪಷ್ಟವಾಗಿ ಗಮನಿಸಬಹುದು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬಳಕೆಯಲ್ಲಿರುವ ಇಂತಹ ಅನ್ಯ ಪ್ರಾಂತೀಯ / ಅನ್ಯ ದೇಶೀಯ ಪದಗಳನ್ನು ಅಧಿಕೃತವಾಗಿ ಕನ್ನಡದ ಪದಗಳು ಎಂಬಂತೆ ಸ್ವೀಕರಿಸುತ್ತಿರುವುದನ್ನು ಸಹ ಗಮನಿಸಬಹುದು.

ರಾಜಪ್ರಭುತ್ವಗಳು ತಮ್ಮ ಮನೆತನದ ಭಾಷೆಗಳನ್ನು ಆಳ್ವಿಕೆಯ ಭಾಷೆಯಾಗಿ ಬಳಸಿಕೊಂಡರೂ ಆಡಳಿತಾತ್ಮಕ ಅನುಕೂಲಕ್ಕಾಗಿ ಜನಸಾಮಾನ್ಯರ ಭಾಷೆಯನ್ನು ಅವಲಂಬಿಸುವುದು ಅನಿವಾರ್ಯವಾಗಿತ್ತು. ಈ ನಿಟ್ಟಿನಲ್ಲಿ ಕರ್ನಾಟಕದ ಪ್ರಾಂತ್ಯಗಳಲ್ಲಿ ಕನ್ನಡವೇ ಅಧಿಕೃತವಾದ ಆಡಳಿತದ, ಅಧಿಕಾರದ ಭಾಷೆಯಾಗಿ ರೂಢಿಯಲ್ಲಿತ್ತೆಂಬುದನ್ನು ಶಾಸನಗಳು ದೃಢೀಕರಿಸುತ್ತವೆ.

ಅಧಿಕಾರದ ಭಾಷೆ, ಆಡಳಿತದ ಭಾಷೆ ಎಂದು ಅಧಿಕೃತವಾಗಿ ಒಂದು ಭಾಷೆಯನ್ನು ರೂಪಿಸಿಕೊಳ್ಳುವುದು ಒಂದು ಪ್ರಮುಖವಾದ ವಿಚಾರ. ಕನ್ನಡವನ್ನೇ ಪರಿಗಣಿಸಿ ಹೇಳುವುದಾದರೆ ನಮ್ಮ ನಡುವೆಯೇ 'ಹಲವಾರು ಕನ್ನಡ'ಗಳಿವೆ. ಆಡುನುಡಿಯಾಗಿ ಕನ್ನಡವು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಬೇರೆ ಬೇರೆಯಾಗಿದೆ. ಪದ ಬಳಕೆಯಲ್ಲಿಯೂ ಅರ್ಥ ವ್ಯತ್ಯಾಸಗಳಿವೆ. ಆದರೆ, ಗ್ರಂಥಸ್ಥ ಕನ್ನಡವು ಒಂದೇ ಅರ್ಥವನ್ನು ಸ್ಫುರಿಸುವುದರಿಂದ ಕಾನೂನುಗಳನ್ನು ಮಾಡುವಲ್ಲಿ, ಪಾಲಿಸುವಲ್ಲಿ, ನಿಯಂತ್ರಿಸುವಲ್ಲಿ ಇಂತಹ ಅಧಿಕೃತ ಭಾಷೆಯು ಸಫಲವಾಗುತ್ತದೆ. ಹಾಗಾಗಿ, ಸರ್ಕಾರಗಳಿಗೆ ಸರಳವಾದ, ಸ್ಪಷ್ಟವಾದ ಭಾಷೆಯು ಆಡಳಿತ ಭಾಷೆಯಾದಾಗ ವ್ಯವಹರಿಸುವುದು ಸುಲಭವಾಗುತ್ತದೆ.

ಸರ್ಕಾರ ಹಾಗೂ ಜನಸಮುದಾಯದ ನಡುವೆ ಸಂಪರ್ಕದ ಭಾಷೆಯಾಗಿ ಬಳಕೆಯಾಗುವ ಆಡಳಿತ ಭಾಷೆಯು ಕೆಲವು ನಿರ್ದಿಷ್ಟ ಹಾಗೂ ಸ್ಪಷ್ಟ ಲಕ್ಷಣಗಳನ್ನು ಹೊಂದಿರಬೇಕಾಗಿರುತ್ತದೆ. ಆಡಳಿತ ಭಾಷೆಯಲ್ಲಿ ಸರಳವಾದ ಚಿಕ್ಕ ವಾಕ್ಯಗಳು ಇರಬೇಕು. ಅದರಲ್ಲಿ ದ್ವಂದ್ವಾರ್ಥ, ವಿಡಂಬನೆ, ಉತ್ಪ್ರೇಕ್ಷೆ, ಪ್ರಶಂಸೆ, ತೆಗಳಿಕೆ, ಒರಟು ಧ್ವನಿಗಳನ್ನು ದೂರವಿಟ್ಟಿರಬೇಕು. ಘನತೆಯುಳ್ಳ ಭಾಷೆಯು ಆಡಳಿತ ಭಾಷೆಯಾಗಿರುವುದು ಅಪೇಕ್ಷಣೀಯ. ಏಕೆಂದರೆ ಆಡಳಿತ ಭಾಷೆಯು ಜನಸಾಮಾನ್ಯರಿಗಾಗಿ ರೂಪುಗೊಂಡಿರುವ ಭಾಷೆಯಾಗಿರುತ್ತದೆ.

ಸರ್ಕಾರದ ಮುಖವಾಣಿಯಾಗಿರುವ ಭಾಷೆ ಕಾಲಕ್ರಮೇಣ ಜನವಾಣಿಯೂ ಆಗಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕನ್ನಡವು ಅಧಿಕಾರಯುತವಾಗಿಯೂ ಅತ್ಯಂತ ಸಮರ್ಥವಾಗಿದ್ದು, ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಿದೆ. ಹಾಗಾಗಿ, ಯಾಜಮಾನ್ಯದ ಸಂಕೇತ ಪದವಾಗಿರುವ 'ಅಧಿಕಾರದ ಭಾಷೆ' ಎನ್ನುವುದಕ್ಕಿಂತಲೂ ಜನವಾಣಿಯಾಗಿ, ಸರ್ಕಾರದ ನಿರ್ವಹಣೆಗೆ ಸೂಕ್ತ ಪದವಾಗಿರುವ 'ಆಡಳಿತ ಭಾಷೆ ಕನ್ನಡ' ಎನ್ನುವ ಪ್ರಯೋಗವೇ ಸರಿಯೆಂದು ತೋರುತ್ತದೆ. ●